ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯದಲ್ಲಿ, ತರೀಕೆರೆ.

ಸಿಸಿ ನಂಬರ್ **513 /2023**

| | | | |
|---|---|---|---|
| ಸಾಕ್ಷಿಯ ಹೆಸರು | : ಶ್ವೇತ ಬಿ | ಸಿ.ಡಬ್ಲ್ಯೂ | 3 |
| ಗಂಡನ ಹೆಸರು | : ದಿಲೀಪ್ ಕುಮಾರ್ | ಪಿ.ಡಬ್ಲ್ಯೂ | 2 |
| ವಯಸ್ಸು | : 35 ವರ್ಷ | | |
| ಉದ್ಯೋಗ | : ಅಬಕಾರಿ ನಿರೀಕ್ಷಕರು,ಚನ್ನಗಿರಿ | | |
| ವಾಸ ಸ್ಥಳ | : ಚನ್ನಗಿರಿ | | |

ದಿನಾಂಕ **11-02-2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು

ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ-

ನಾನು 2020 ರಿಂದ ಜುಲೈ 24 ನೇ ಸಾಲಿನವರೆಗೆ ತರೀಕೆರೆಯಲ್ಲಿ ಅಬಕಾರಿ ನಿರೀಕ್ಷಕರು ಎಂದು ಕೆಲಸ ಮಾಡಿದ್ದೇನೆ.

ಈ ಪ್ರಕರಣದಲ್ಲಿ ದಿನಾಂಕ 04-11-2022 ರಂದು ಬೆಳಗ್ಗೆ 9-15 ರ ಸುಮಾರಿಗೆ ನಾನು ಅಜ್ಜಂಪುರ ತಾಲ್ಲೂಕಿನ ಕುಡ್ಲೂರು ಮಾರ್ಗದಲ್ಲಿ ಸಿಬ್ಬಂಧಿಯೊಂದಿಗೆ ಗಸ್ತಿನಲ್ಲಿ ಇದ್ದಾಗ ನಾಗವಂಗಲ ಗೇಟ್ ಹತ್ತಿರ ಒಬ್ಬ ವ್ಯಕ್ತಿ ಅಕ್ರಮಾಗಿ ಮದ್ಯ ಸಂಗ್ರಹಿಸಿ ಮಾರಾಟ ಮಾಡುತ್ತಿರುವ ಬಗ್ಗೆ ಮಾಹಿತಿ ಬಂದಿದೆ. ಅದರಂತೆ ನಾನು ನನ್ನ ಜೊತೆ ಇದ್ದ ಸಿಬ್ಬಂಧಿಯೊಂದಿಗೆ ಮಾಹಿತಿ ಬಂದ ಸ್ಥಳದ ಕಡೆಗೆ ಹೋದೆನು. ಅಲ್ಲಿ ಒಬ್ಬ ವ್ಯಕ್ತಿಯು ಕೈಯಲ್ಲಿ ಕಪ್ಪು ಬಣ್ಣದ ಪ್ಲಾಸಿಟಿಕ್ ಕವರನ್ನು ಹಿಡಿದುಕೊಂಡು ನಿಂತಿದ್ದು ನಮ್ಮನ್ನು ನೋಡಿ ಓಡಿಹೋಗಲು ಪ್ರಯತ್ನ ಮಾಡಿದನು. ನಾನು ಸಿಬ್ಬಂದಿಯ ಸಹಾಯದಿಂದ ಆತನನ್ನು ಹಿಡಿದು ತರಿಸಿದೆನು. ಆತನ ಹೆಸರನ್ನು ಕೇಳಿದಾಗ ವ್ಯಕ್ತಿಯು ಹೆಸರನ್ನು ಚೇತನ್ ತಂದೆ ಪರಮೇಶ್ವರಪ್ಪ ಎಂದು ತಿಳಿಸಿದನು. ಸಿಬ್ಬಂಧಿಯ ಸಹಾಯದೊಂದಿಗೆ ಪ್ಲಾಸ್ಟಿಕ್ ಕವರನ್ನು ಪರಿಶೀಲಿಸಿದಾಗ ಅದರಲ್ಲಿ 90 ಎಂ.ಎಲ್ ನ 40 ರಾಜಾ ವಿಸ್ಕಿ ಸ್ಯಾಚೆಟ್‌ಗಳು ದೊರೆತವು. ಅವುಗಳನ್ನು ಇಟ್ಟುಕೊಳ್ಳಲು ಅಥವಾ ಮಾರಾಟ ಮಾಡಲು ಆರೋಪಿಯ ಬಳಿ ಪರವಾನಗಿ ವಗೈರೆ ಇರಲಿಲ್ಲ. ನಾನು ರಸ್ತೆಯಲ್ಲಿ ಹೋಗುತ್ತಿದ್ದ ಇಬ್ಬರು ಸಾರ್ವಜನಿಕರನ್ನು ಪಂಚರಾಗುವಂತೆ ಕೇಳಿದಾಗ ಅವರು ಒಪ್ಪಿಕೊಳ್ಳಲಿಲ್ಲ, ಕಾರಣ ನನ್ನ ಸಿಬ್ಬಂಧಿಯ ಸಮಕ್ಷಮದಲ್ಲಿಯೇ ಬೆಳಗ್ಗೆ 9-45 ರಿಂದ 10-30 ಗಂಟೆ ಮದ್ಯದಲ್ಲಿ ಪಂಚನಾಮೆಯನ್ನು ಜರುಗಿಸಿ ಮುದ್ದೆಮಾಲನ್ನು ನನ್ನ ವಶಕ್ಕೆ ಪಡೆದುಕೊಂಡೆನು. ಅಲ್ಲದೇ ಆತನ ಬಳಿ ಇದ್ದ ರೂ.150/- ಗಳನ್ನು ಕೂಡ ಅಮಾನತ್ತುಪಡಿಸಿಕೊಂಡೆನು. ನಂತರ ಆರೋಪಿ ಮತ್ತು ಮುದ್ದೆಮಾಲಿನೊಂದಿಗೆ ಕಛೇರಿಗೆ ಬಂದು ಸರ್ಕಾರದ ತರ್ಫೆ ನಾನೇ ಪ್ರಕರಣವನ್ನು ದಾಖಲಿಸಿದ್ದೇನೆ. ಜಪ್ತಿ ಪಂಚನಾಮೆಯನ್ನು ಈಗಾಗಲೇ ನಿ.ಪಿ-1 ಎಂದು ಗುರುತಿಸಿದ್ದು, ಸಹಿಯನ್ನು ನಿ.ಪಿ-1(ಬಿ) ಎಂದು ಗುರುತಿಸಿಕೊಳ್ಳುತ್ತೇನೆ. ಸ್ವ-ದೂರನ್ನು ನಿ.ಪಿ-2 ಎಂದು ಮತ್ತು ಸಹಿಯನ್ನು ನಿ.ಪಿ-2(ಎ) ಎಂದು, ಪ್ರ.ವ.ವರದಿಯನ್ನು ನಿ.ಪಿ-3 ಎಂದು, ಸಹಿಯನ್ನು ನಿ.ಪಿ-3(ಎ) ಎಂದು

ಗುರುತಿಸಿಕೊಳ್ಳುತ್ತೇನೆ. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ ಮತ್ತು ಮು.ಮಾ-1 ಮತ್ತು 2 ನ್ನು ನೋಡಿ ಗುರುತಿಸುತ್ತೇನೆ. ದಸ್ತಗಿರಿ ನಿಯಮಗಳನ್ನು ಅನುಸರಿಸಿ ಆರೋಪಿಯನ್ನು ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿದ್ದೇನೆ. ದಾಳಿಯ ಸಮಯದಲ್ಲಿ ತೆಗೆಸಿದ ಫೋಟೊಗಳನ್ನು ನಿ.ಪಿ-4 ಮತ್ತು 5 ಎಂದು ಗುರುತಿಸಿಕೊಳ್ಳುತ್ತೇನೆ.

ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ

ನನಗೆ ಮಾಹಿತಿ ಬಂದಾಗ ನಾನು ಅಜ್ಜಂಪುರದಿಂದ ಕುಡ್ಲೂರಿಗೆ ಹೋಗುವ ರಸ್ತೆಯಲ್ಲಿ ಇದ್ದೆನು. ಮಾಹಿತಿ ಬಂದ ಸ್ಥಳದಿಂದ ನಾನು ಇದ್ದ ಸ್ಥಳ 7-8 ಕಿ.ಮೀ ಅಂತರದಲ್ಲಿ ಇರಬಹುದು. ಮಾಹಿತಿ ಬಂದ ತಕ್ಷಣವೇ ನಾನು ಸ್ಥಳದಿಂದ ಹೊರಟ್ಟಿದ್ದೇನೆ ಮತ್ತು 9-45 ಗಂಟೆ ಸುಮಾರಿಗೆ ಅಲ್ಲಿಗೆ ಹೋಗಿದ್ದೇನೆ. ನನಗೆ ಯಾವುದೇ ಮಾಹಿತಿ ಬಂದಿಲ್ಲ, ನಾನು ಯಾವುದೇ ದಾಳಿಗೆ ಹೋಗಿಲ್ಲ ಎಂದರೆ ಸರಿಯಲ್ಲ. ಆರೋಪಿಯ ಬಳಿ ನನಗೆ ಯಾವುದೇ ಮದ್ಯ ದೊರೆತಿಲ್ಲ, ಆತನು ಅಲ್ಲಿ ಯಾವುದೇ ಅಕ್ರಮ ಮದ್ಯ ಮಾರಾಟ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಪಂಚನಾಮೆಯನ್ನು ಮಾಡಿಲ್ಲ ಮತ್ತು ಮದ್ಯವನ್ನು ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಮು.ಮಾ-1 ಕ್ಕೂ ಮತ್ತು ಈ ಪ್ರಕರಣಕ್ಕೂ ಮತ್ತು ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಇಲಾಖೆಯ ಅಂಕಿಸಂಖ್ಯೆಗೋಸ್ಕರ ಸುಳ್ಳು ಪ್ರಕರಣ ದಾಖಲಿಸಲಾಗಿದೆ ಎಂದರೆ ಸರಿಯಲ್ಲ. ಫೋಟೋಗಳನ್ನು ಈ ಪ್ರಕರಣಕ್ಕೋಸ್ಕರ ಮಾತ್ರ ತೆಗೆಯಲಾಗಿದೆ ಎಂದರೆ ಸರಿಯಲ್ಲ. ಸಾರ್ವಜನಿಕರು ಪಂಚರಾಗಲು ಒಪ್ಪಿಕೊಳ್ಳಲಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ : ಇಲ್ಲಃ

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸ ಇ ಎ ಒ

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ
ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ತರೀಕೆರೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯದಲ್ಲಿ, ತರೀಕೆರೆ.
ಸಿಸಿ ನಂಬರ್ **/202**

ಸಾಕ್ಷಿಯ ಹೆಸರು : ಸಿ.ಡಬ್ಲ್ಯು
ತಂದೆಯ ಹೆಸರು : ಪಿ.ಡಬ್ಲ್ಯು
ವಯಸ್ಸು : ವರ್ಷ
ಉದ್ಯೋಗ :
ವಾಸ ಸ್ಥಳ :

ದಿನಾಂಕಃ**17-09-2024** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು

ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ-

ನಾನು 2019 ರಿಂದ 2024 ರವರೆಗೆ

(ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ. ರವರು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು)

ಪಾಟೀ ಸವಾಲುಃ ಮಾನ್ಯ ಸ.ಸ.ಅ.ರವರಿಂದಃ-

ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ

ಮರುವಿಚಾರಣೆ : ಇಲ್ಲಃ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ
ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ತರೀಕೆರೆ.